# ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ. ನಂ. 191/2019**

ಸಿ.ಡಬ್ಲ್ಯು 3

ಪಿ.ಡಬ್ಲ್ಯು 5

ಸಾಕ್ಷಿದಾರರ ಹೆಸರು – ಗುರು ಗೌಡ

ತಂದೆಯ ಹೆಸರು – ನಾರಾಯಣ ಗೌಡ

ವಯಸ್ಸು – 33 ವರ್ಷ

ಉದ್ಯೋಗ – ಕೂಲಿ ಕೆಲಸ

ವಾಸ್ತವ್ಯ – ದುಂಡಕುಳಿ

(ಇಂದು ದಿನಾಂಕಃ 21-11-2023 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾ.ಸಾ. 1 ಮತ್ತು 2 ರವರ ಪರಿಚಯ ಇದೆ. ಅವರು ನಮ್ಮ ಊರಿನವರು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಸಹಿ ಕಂಡುಬರುವುದಾಗಿ ಒಪ್ಪಿದ್ದು, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 2(ಬಿ) ಎಂದು ಗುರುಸಲಾಯಿತು. ಸುಮಾರು 5- 6 ವರ್ಷಗಳ ಹಿಂದೆ ಕಳ್ಳತನದ ವಿಚಾರವಾಗಿ ಶ್ರೀ ಬೊಮ್ಮಲಿಂಗೇಶ್ವರ ದೇವಸ್ಥಾನ ದುಂಡಕುಳಿ ಹತ್ತಿರ ಹಾಕಿರುತ್ತೇನೆ. ನಿ.ಪಿ. 2 ಜರುಗಿಸುವ ಸಂದರ್ಭದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿ.ಪಿ. 2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತಾವು ಕಂಡುಬರುವುದಾಗಿ

ಒಪ್ಪಿದ್ದು, ಅದನ್ನು ಈಗಾಗಲೇ ನಿ.ಪಿ. 3 ಎಂದು ಗುರುತಿಸಲಾಗಿರುತ್ತದೆ. ನಿ.ಪಿ. 2 ಜರುಗಿಸುವ ಸಂದರ್ಭದಲ್ಲಿ ನಿ.ಪಿ. 3 ನ್ನು ತೆಗೆದಿರುತ್ತಾರೆ.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 14-09-2017 ರಂದು ನಿ.ಪಿ. 2 ಪಂಚನಾಮೆ ಯನ್ನು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ. 2 ನ್ನು ಮದ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯ ವರೆಗೆ ಜರುಗಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿ.ಪಿ. 2 ಜರುಗಿಸುವ ಸಂದರ್ಭದಲ್ಲಿ ಪೊಲೀಸರು ಬೀಗದ ತಟ್ಟೆಯನ್ನು ಅಮಾನತ್ತುಪಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿ.ಪಿ. 2 ನ್ನು ಜರುಗಿಸಿದ್ದು ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 2 ಜರುಗಿಸುವ ಸಂದರ್ಭದಲ್ಲಿ ಪೊಲೀಸರು ಬೀಗದ ತಟ್ಟೆಯನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರು ಸಹ ವಶಪಡಿಸಿಕೊಂಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು –ಆರೋಪಿತರ ಪರ ಶ್ರೀ ಎನ್.ಎಮ್.ಹೆಚ್. ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ